ಮಂಗಳೂರಿನಲ್ಲಿ ಸಾಕಷ್ಟು ನೀರಿದೆ. ಆ ನೀರನ್ನು ಇವರಿಗೆ ಕೊಡುವುದಕ್ಕೆ ಕಾರ್ಪೊರೇಷನ್ ಒಪ್ಪಿದೆ. ದುಡ್ಡು ಕಟ್ಟುವವರು ಯಾರು ಎಂಬ ಪ್ರಶ್ನೆಗೆ ಉತ್ತರ ಇರಲಾರದೆ ಕೆಲಸವಾಗಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಮಹಾನಗರಪಾಲಿಕೆಯವರು ನೀರನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಮಲೆನಾಡು ಪ್ರದೇಶದಲ್ಲಿ 150-200 ಇಂಚು ಮಳೆ ಬೀಳುತ್ತದೆ. ಆದರೆ ಬಿಸಿಲುಗಾಲ ಬಂದರೆ ನೀರು ಇರುವುದಿಲ್ಲ. ಇದು ನಮ್ಮ ಪರಿಸ್ಥಿತಿ. ಇದು ಕೊಡಗಿನಲ್ಲೂ ಇದೆ. ಆದರೆ ಅವರ ಪರಿಸ್ಥಿತಿ ನನಗೆ ಗೊತ್ತಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅದಕ್ಕೆ ಕಾರಣವೇನು ಹೇಳಿ. ಮಳೆ ಬೇಸಿಗೆ ಕಾಲದಲ್ಲಿ, ಎಲ್ಲಿ ಜಾಸ್ತಿ ಬೀಳುತ್ತಿರುತ್ತದೆ, ಆ ಮಣ್ಣು ಬಹಳ ಬಿಗಿಯಾಗಿರುತ್ತೆ. ಅಲ್ಲಿ ನೀರಿನ ವ್ಯವಸ್ಥೆ ಕಡಿಮೆ ಇರುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಊ) ಉಳ್ಳಾಲ ಕ್ಷೇತ್ರದ ಬಜಾಲು ಗ್ರಾಮವನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸುವುದು.

ಶ್ರೀ ಕೆ.ಜಯರಾಮಶೆಟ್ಟಿ(ಉಳ್ಳಾಲ): ಮಾನ್ಯ ಅಧ್ಯಕ್ಷರೇ, ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶಗಳು, ನೇತ್ರಾವತಿಯ ಒಂದು ಭಾಗದಲ್ಲಿ ನಗರಪ್ರದೇಶಗಳು, ನೇತ್ರಾವತಿಯ ಇನ್ನೊಂದು ಭಾಗದಲ್ಲಿದೆ. ನಗರಪ್ರದೇಶಕ್ಕೆ ತಾಗಿಕೊಂಡು ನನ್ನ ಕ್ಷೇತ್ರದಲ್ಲಿ ಬಜಾಲು ಗ್ರಾಮವೆಂಬ ಗ್ರಾಮಪಂಚಾಯಿತಿ ಇದೆ. ಈಗ ಇದರ ಜನಸಂಖ್ಯೆ ಸುಮಾರು 25 ಸಾವಿರ. ಇಲ್ಲಿ ಪೂರ್ಣ ಪ್ರಮಾಣದಲ್ಲಿ ಕುಡಿಯುವ ನೀರಿನ ತೊಂದರೆ ಇದ್ದುದ್ದರಿಂದ ಹಿಂದೆ ಮಂಗಳೂರು ಮಹಾನಗರ ಪಾಲಿಕೆಯವರು ಇಲ್ಲಿಗೆ ನೀರನ್ನು ಒದಗಿಸಿಕೊಟ್ಟು ಸುಮಾರು 7 ಲಕ್ಷ ರೂಪಾಯಿ ಗ್ರಾಮ ಪಂಚಾಯಿತಿಯು ನಗರಪಾಲಿಕೆಗೆ ಕೊಡಲಿಕ್ಕೆ ಬಾಕಿ ಇತ್ತು. ಆದರೆ ಈಗ ಕಳೆದ ಅಧಿವೇಶನದಲ್ಲಿ ನಾನು ರಾಜ್ಯಸರ್ಕಾರವನ್ನು ವಿನಂತಿ ಮಾಡಿದ್ದೇನೆ. ಆ ಗ್ರಾಮಪಂಚಾಯಿತಿ ಕೂಡ ಅದನ್ನು ಮಂಗಳೂರು ಮಹಾನಗರಪಾಲಿಕೆಯಲ್ಲಿ ವಿಲೀನಗೊಳಿಸಲಿಕ್ಕೆ ಒಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಮಂಗಳೂರು ಮಹಾನಗರಪಾಲಿಕೆ ಕೂಡ ಒಂದು ನಿರ್ಣಯವನ್ನು ತೆಗೆದುಕೊಂಡು ಬಜಾಲು ಗ್ರಾಮವನ್ನು ಮಂಗಳೂರು ಮಹಾನಗರಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ಒಪ್ಪಿಗೆಯನ್ನು ಕೂಡ ಕೊಟ್ಟಿತ್ತು. ಆದರೆ ಇಷ್ಟರವರೆಗೆ ಬಜಾಲು ಗ್ರಾಮವು ಮಂಗಳೂರು ಮಹಾನಗರಪಾಲಿಕೆಯಲ್ಲಿ ಸೇರ್ಪಡೆಗೊಂಡಿಲ್ಲ. ಜೊತೆಗೆ ಈಗ ಹೊಸ ಗ್ರಾಮಪಂಚಾಯಿತಿಗಳ ವಿಂಗಡಣೆಯಾಗುವ ಸಂದರ್ಭದಲ್ಲಿ ಈಬಜಾಲು ಗ್ರಾಮವನ್ನು

ಕಣ್ಣೂರು ಗ್ರಾಮಕ್ಕೆ ಸೇರಿಸಿ ಪ್ರತ್ಯೇಕ ಗ್ರಾಮ ಪಂಚಾಯಿತಿ ಮಾಡುವ ಒಂದು ವ್ಯವಸ್ಥೆ ಕೂಡ ನಡೆಯುತ್ತಿರುವುದರಿಂದ ನಾನು ರಾಜ್ಯಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಇಷ್ಟು ದೊಡ್ಡ ಜನಸಂಖ್ಯೆ ಇರುವ ಗ್ರಾಮವನ್ನು ಮತ್ತು ತೀವ್ರತರ ಮೂಲಭೂತ ಸೌಲಭ್ಯದ ತೊಂದರೆ ಇರುವುದರಿಂದ ಇದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಗೊಳಿಸುವಲ್ಲಿ ರಾಜ್ಯ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಚುನಾವಣೆಗೋಸ್ಕರ ಇದನ್ನು ಪ್ರತ್ಯೇಕ ಗ್ರಾಮಪಂಚಾಯಿತಿ ಮಾಡಬೇಡಿ. ದಯವಿಟ್ಟು ಇದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಳ್ಳಬೇಕೆಂದು ಹೇಳುತ್ತೇವೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೆಲವು ಕಾನೂನಿನ ಅಂಶಗಳಿವೆ. ಒಂದು ಕಡೆ ಇದನ್ನು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡಬೇಕೆಂದು. ಇನ್ನೊಂದು ಕಡೆ ಅವರೇ ಹೇಳುತ್ತಾರೆ ಗ್ರಾಮ ಪಂಚಾಯಿತಿಗೆ ಈಗಾಗಲೇ ಅದನ್ನು ಪರಿವರ್ತನೆ ಮಾಡಿದ್ದಾರೆ ಎಂದು. ಬಹುಶಃ ಯಾವ ರೀತಿ ಈ ಒಂದು ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂದು ಹೇಳುವಲ್ಲಿ ಪಂಚಾಯಿತಿ ಮಂತ್ರಿಗಳ ಜೊತೆಯಲ್ಲೂ ಮತ್ತು ಮಹಾನಗರ ಪಾಲಿಕೆಗೆ ಸಂಬಂಧಪಟ್ಟವರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳೋಣ. ಕಡೆಗೆ ಬೇಕಾಗಿರುವುದು ನೀರಿನ ವ್ಯವಸ್ಥೆ ನೀರಿನ ವ್ಯವಸ್ಥೆಯನ್ನು ಮಾಡೋಣ.

ಋ) ಚಿಕ್ಕಮಗಳೂರಿನ ಬೀರೂರು, ಕಡೂರು ಮತ್ತು ಹಾಸನ ಜಿಲ್ಲೆಯ ಗೌಡ ಜನಾಂಗ ಕುರಿತು.

ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನ ಬೀರೂರು ಕಡೂರು ಕಡೆ ಮತ್ತು ಹಾಸನ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಕೂಡ ಇದೆ. ಕೆಲವು ಗೌಡ ಜನಾಂಗ ಅದು ಪರಿಶಿಷ್ಟ ಪಂಗಡಕ್ಕಿಂತಲೂ ಬಹಳ ಕಡಿಮೆ ಇದ್ದಾರೆ. ಅವರು ಇರತಕ್ಕ ಜಾಗಕ್ಕೆಲ್ಲಾ ನಾನು ಹೋಗಿದ್ದೇನೆ.

ಅಧ್ಯಕ್ಷರು: ಅವರು ಮಾತನಾಡುವುದು ತೆಲುಗಾ?

ಶ್ರೀ ಎಂ.ವೀರಪ್ಪಮೊಯಿಲಿ: ಅವರು ತೆಲುಗು ಮಾತನಾಡುತ್ತಾರೆ. ಆದರೆ ಅವರು ಅಲ್ಲೇ ಸೆಟ್ಲ್ ಆದವರು. ಅಲ್ಲೇ ಹುಟ್ಟಿದವರು. ಬಹಳ ಅತ್ಯಂತ ಮೋಸ್ಟ್ ಬ್ಯಾಕ್‌ವರ್ಡ್ ಕಮ್ಯುನಿಟಿ. ಈಗ ಏನಾಗಿದೆ ಎಂದರೆ ಪ್ರೊಫೆಶನಲ್‌ಕಾಲೇಜು ಸೇರಬೇಕಾದರೆ ಸರ್ಟಿಫಿಕೇಟ್ ಸಿಗುತ್ತಿಲ್ಲ. ಅದಕ್ಕೆ ತಕ್ಷಣ ತಾತ್ಕಾಲಿಕವಾಗಿಯಾದರೂ ಕೂಡ ತಾವು ಅವರಿಗೆ ಕ್ಯಾಸ್ಟ್ ಸರ್ಟಿಫಿಕೇಟನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖೇನ ಅವರಲ್ಲಿ ಕೇಳುತ್ತೇನೆ.